# ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ

## ಫೌಜುದಾರಿ ಪ್ರಕರಣ ಸಂಖ್ಯೆ: 89/2020

| | | |
|---|---|---|
| ಫಿರ್ಯಾದಿಃ | | ಸರಕಾರದ ಪರವಾಗಿ<br>ಪೋಲಿಸ್ ವೃತ್ತ ನಿರೀಕ್ಷಕರು,<br>ಹೊನ್ನಾವರ ವೃತ್ತ, ಹೊನ್ನಾವರ. |
| | | -ವಿರುದ್ಧ- |
| ಆರೋಪಿಃ | 1) | ಸಜ್ಜಾದ ಅಹ್ಮದ ತಂದೆ ಕುತುಬುದ್ದಿನ ಗನಿ,<br>ವಯಸ್ಸುಃ 28 ವರ್ಷಗಳು,<br>ಉದ್ಯೋಗಃ ಅಡಿಕೆ ವ್ಯಾಪಾರ, |
| | 2) | ಮುಬಾಶೀರ ತಂದೆ ಕುತುಬುದ್ದಿನ ಗನಿ,<br>ವಯಸ್ಸುಃ30 ವರ್ಷಗಳು,<br>ಉದ್ಯೋಗಃ ಇಲೆಕ್ಟ್ರೀಷಿಯನ್ ಕೆಲಸ,<br>ಸಾಕೀನಃ ತೊಹಿದಮೊಹಲ್ಲಾ, ಚಂದಾವರ,<br>ತಾಲೂಕುಃ ಹೊನ್ನಾವರ. |

## ದೋಷಾರೋಪಣೆ

ಶ್ರೀ ಕುಮಾರ ಜಿ, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನೀವು ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನ ಹೊರೆಸುತ್ತಿದ್ದೇನೆ.

1.ಮೊದಲನೇಯದಾಗಿ, ದಿನಾಂಕಃ 31-12-2019 ರಿಂದ 01-01-2020 ರಂದು ಮಧ್ಯರಾತ್ರಿ 10-30 ಸಮಯದ ನಡುವಿನ ಅವಧಿಯಲ್ಲಿ ಹೊನ್ನಾವರ ಪೋಲಿಸ್ ಠಾಣಾ ಸರಹದ್ದಿನಲ್ಲಿರುವ ಹೊನ್ನಾವರ ತಾಲೂಕು ಹೊದಿಕೆಶಿರೂರು ಹೊವಿನಹಿತ್ಲದಲ್ಲಿರುವ ಆರೋಪಿತರಾದ ನೀವು ಚಾಸಾ-1 ಶ್ರೀ ಸಾಂತೋಲಿನ್ ಇಸೇಂತಾ ರೊಡ್ರಿಗೀಸ್‌ರವರ ವಾಸದ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ, ಸದರಿ ಮನೆಯಲ್ಲಿ ಕಳ್ಳತನ ಮಾಡುವ ಉದ್ದೇಶದಿಂದ ಹಿಂದಿನ ಬಾಗಿಲಿಗೆ ಹಾಕಿದ್ದ ಬೀಗವನ್ನು ಕಬ್ಬಿಣದ ರಾಡಿಗಳಿಂದ ಮೀಟಿ ಮುರಿದು ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿ ಭಾರತೀಯ ಕಂಡ ಸಂಹಿತೆ ಕಲಂ 457 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

2) ಕೊನೆಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿತರಾದ ನೀವುಗಳು ಮನೆಯೊಳಗಡೆ ಅತಿಕ್ರಮ ಪ್ರವೇಶ ಮಾಡಿ ಬೆಡ್‌ರೂಮಿನಲ್ಲಿದ್ದ ಗೋದ್ರೆಜ ಕಪಾಟಿನ ಬಾಗಿಲನ್ನು ತೆಗೆದು ಅದರಲ್ಲಿದ್ದ ಅಂದಾಜು ತೂಕ 9.750 ಗ್ರಾಂ 4 ಬಂಗಾರದ ಉಂಗುರಗಳು, ಅಂದಾಜು ತೂಕ 31.2 ಗ್ರಾಂ 03 ಚೈನುಗಳು ಮತ್ತು ಅಂದಾಜು ತೂಕ 9.9

ಗ್ರಾಂ 01 ಬಳೆಗಳು ಸೇರಿ ಒಟ್ಟೂ ರೂ.1,75,000/- ಬಂಗಾರದ ಆಭರಣಗಳನ್ನ ಹಾಗೂ ನಗದು ಹಣ ರೂ.60,000/- ಕಳ್ಳತನ ಮಾಡಿಕೊಂಡು ಹೋಗಿದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

**(ಆರೋಪಣೆಯನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷ್ಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಆತ ನೀಡಿದ ಉತ್ತರವನ್ನ ಯಾಥವತ್ತಾಗಿ ದಾಖಲಿಸಿಕೊಳ್ಳಲಾಯಿತು.)**

ದಿನಾಂಕಃ 04-06-2022

ಸ್ಥಳಃ ಹೊನ್ನಾವರ.

**(ಶ್ರೀ ಕುಮಾರ ಜಿ.,)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಕಂಡಾಧಿಕಾರಿಗಳು, ಹೊನ್ನಾವರ.**